**ಸಾಕ್ಷಿಯನ್ನು ದಿನಾಂಕ 11-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ.ಆರ್.ವಿ ವಕೀಲರಿಂದಃ**

1. ನಾನು ವಕೀಲನಾಗಿ ಕಳೆದ 10 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಅಣ್ಣ ಹೆಸರು ಬಿ.ಕೆ.ಗಿರೀಶ್. ಅವರು ನ್ಯಾಯಧೀಶರಾಗಿದ್ದಾರೆ. ನನಗೆ ಕಾನೂನಿನ ಸಂಪೂರ್ಣ ಜ್ಞಾನ ಇದೆ ಎಂದರೆ ಸರಿ. ಈ ಹಿಂದೆ ಇದೇ ಪ್ರತಿವಾದಿಯರ ವಿರುದ್ಧ ಅಸಲು ದಾವೆ ಸಂಖ್ಯೆ 376/2016 ರಂತೆ ಒಂದು ದಾವೆ ಹಾಕಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದೆ. ಈ ದಾವೆಯನ್ನು ಸಹ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದೇನೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 376/2016 ರ ದಾವೆ ಪ್ರತಿವಾದಿಯರಿಗೆ ಕಲಂ 80 ಸಿಪಿಸಿ ಅಡಿ ನೋಟಿಸು ಕೊಟ್ಟಿಲ್ಲ ಎಂಬ ಕಾರಣಕ್ಕೆ ವಜಾ ಆಗಿದೆ. ಸದರಿ ವಜಾ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಇದೇ ನ್ಯಾಯಾಲಯದಲ್ಲಿ ಪುರ್ನಪರಿಶೀಲನಾ ಅರ್ಜಿ ಹಾಕಿದ್ದೇನೆ ಎನ್ನುತ್ತಾರೆ. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಾಕ್ಷಿ ಪುನಃ ದಾಖಲೆ ಕೊಟ್ಟಿಲ್ಲ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ 376/2016 ದಿನಾಂಕ 12.07.2022 ರಂದು ವಜಾ ಆಗಿದೆ ಎಂದರೆ ಸರಿ. ದಿನಾಂಕ 01.08.2022 ಕ್ಕೆ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

2. ಅಸಲು ದಾವೆ ಸಂಖ್ಯೆ 376/2016 ರ ದಾವೆ ವಜಾ ಆದ ನಂತರ ಅಥವಾ ಈ ದಾವೆ

ಸಲ್ಲಿಸುವ ನಡುವೆ ದಾವಾ ಸ್ವತ್ತಿನಲ್ಲಿನ ನನ್ನ ಸ್ವಾಧೀನಕ್ಕೆ ಯಾವುದೇ ಅಡಚಣೆ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿದ್ದೇನೆ. ಈ ದಾವೆ ದಾಖಲಿಸುವ ಮೊದಲು ಸಹ ನಾನು ಪ್ರತಿವಾದಿಯರಿಗೆ ನೋಟಿಸು ಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ದಾವಾ ಷೆಡ್ಯೂಲ್ ಬಿ ಸ್ವತ್ತು ನನಗೆ ದಾನ ಪತ್ರದ ಮೂಲಕ ಬಂದಿದೆ. ಅದಕ್ಕೂ ಮೊದಲು ಸದರಿ ಸ್ವತ್ತು ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದಿತ್ತು. ನಾನು ವಾಸವಿರುವ ಮನೆ ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿದೆ. ಸದರಿ ಮನೆಯ ಮುಂಭಾಗ ರೈಲ್ವೆ ನಿಲ್ದಾಣಕ್ಕೆ ಹೋಗುವ ರಸ್ತೆ ಇದೆ ಎಂದರೆ ಸಾಕ್ಷಿ ರೈಲ್ವೆ ಇಲಾಖೆಯ ಜಾಗ ಇದೆ ಎನ್ನುತ್ತಾರೆ. ರೈಲ್ವೆ ಮತ್ತು ಅಂಚೆ ಇಲಾಖೆಗಳು ಕೇಂದ್ರ ಸರ್ಕಾರದ ಸಂಸ್ಥೆಗಳು ಎಂದರೆ ಸರಿ. ಸದರಿ ಇಲಾಖೆಯವರಿಗೆ ಸರ್ಕಾರ ಕೊಟ್ಟಿರುವ ಜಾಗದಲ್ಲಿ ಅದರ ಅಧಿಕಾರಿಗಳು ಸಂಸ್ದೆಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ.

4. ನನ್ನ ತಂದೆಗೆ ಖಾತಾ ನಂಬರ್ 443/483 ರಲ್ಲಿ ಒಟ್ಟಾರೆ 16x102 ಅಡಿ ವಿಸ್ತೀರ್ಣದ ಜಾಗ ಪಿತ್ರಾರ್ಜಿತವಾಗಿ ಬಂದಿತ್ತು. ಸದರಿ ಆಸ್ತಿಯನ್ನು ನಾನು ಮತ್ತು ನನ್ನ ಇಬ್ಬರು ಸಹೋದರರು ಹಾಗೂ ಒಬ್ಬ ಸಹೋದರಿ ಪಾಲು ವಿಭಾಗ ಮಾಡಿಕೊಂಡಿದ್ದೆವು. ಪಾಲು ವಿಭಾಗದಲ್ಲಿ ನನ್ನ ಸಹೋದರಿಗೆ ಕೊಟ್ಟ ಆಸ್ತಿ ದಾವಾ ಸ್ವತ್ತಿನ ಅಜೂ-ಬಾಜೂ ಇಲ್ಲ, ಅದು ಪ್ರತ್ಯೇಕವಾಗಿದೆ. ಆಕೆಯ ಪಾಲಿಗೆ ಬಂದಿರುವ ಆಸ್ತಿಯ ಮುಂಭಾಗದಲ್ಲಿ ಬಿ.ಹೆಚ್ ರಸ್ತೆ ಇದೆ. ನನ್ನ ತಂದೆಗೆ ಬಂದಿತ್ತು ಎನ್ನಲಾದ 16 x102 ಅಡಿ ಸಂಪೂರ್ಣ ಜಾಗಕ್ಕೆ ಬಿ.ಹೆಚ್ ರಸ್ತೆ

ಮೂಲಕವೇ ಓಡಾಡಬೇಕಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸದರಿ ಜಾಗದ ಮುಂಭಾಗದಲ್ಲಿ ಮಾತ್ರ ಬಿ.ಹೆಚ್ ರಸ್ತೆ ಇದೆ ಹಾಗೂ ಅದರ ಹಿಂಭಾಗದಲ್ಲಿ ಅಂಚೆ ಇಲಾಖೆಯ ಕಂಸರ್ವೆನ್ಸಿ ಇದೆ ಎನ್ನುತ್ತಾರೆ. ಸಾಕ್ಷಿ ಪುನಃ ಸದರಿ ಕಂಸರ್ವೆನ್ಸಿ ನಗರ ಸಭೆಗೆ ಸೇರಿದೆ ಎನ್ನುತ್ತಾರೆ. ನನ್ನ ತಂದೆಗೆ ಬಂದಿದ್ದ 16x102 ಅಡಿ ಜಾಗದ ಮುಂಭಾಗದಲ್ಲಿ ಇರುವ ಬಿ.ಹೆಚ್ ರಸ್ತೆಯನ್ನು ಹೊರತುಪಡಿಸಿ ಅದರ ಅಕ್ಕ–ಪಕ್ಕದಲ್ಲಿ ಬೇರೆ ಯಾವುದೇ ರಸ್ತೆ ಇಲ್ಲ ಹಾಗೂ ದಾವಾ ಷೆಡ್ಯೂಲ್ ಎ ಸ್ವತ್ತು ಹಿತ್ತಲಾಗಿ ಬಿಟ್ಟಿಕ್ಕೊಳ್ಳಲಾಗಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಎ ಮತ್ತು ಬಿ ಸ್ವತ್ತುಗಳಿಗೆ ಲಗತ್ತಾಗಿ ರೈಲ್ವೆ ಇಲಾಖೆಯ ಕಾಂಪೌಂಡ್ ಇದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ ತೋರಿಸಲಾಗಿರುವ ಎರಡು ಸ್ವತ್ತುಗಳು ನಮ್ಮ ಮನೆಯ ಹಿತ್ತಲಾಗಿದ್ದು, ಅದಕ್ಕೆ ಹೊಂದಿಕೊಂಡೆ ರೈಲ್ವೆ ಇಲಾಖೆ ಕಾಂಪೌಂಡ್ ಇದ್ದರೂ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಅಂಚೆ ಕಚೇರಿ ಕಟ್ಟಡ 1926 ರಿಂದ ಅಸ್ತಿತ್ವದಲ್ಲಿದೆ ಎನ್ನುವುದು ಸುಳ್ಳು. 1926 ರಿಂದ ಇಲ್ಲಿಯವರೆಗೆ ಅದೇ ಜಾಗದಲ್ಲಿ ಅಂಚೆ ಕಚೇರಿ ನಡೆಯುತ್ತಿದೆ ಎಂದರೆ ಸಾಕ್ಷಿ ಕಂಸರ್ವೆನ್ಸಿ ಜಾಗದಲ್ಲಿ ಅಂಚೆ ಕಚೇರಿ ಕಟ್ಟಡ ಇಲ್ಲ ಎನ್ನುತ್ತಾರೆ. ನಾನು ಹೇಳುವಂತೆ ಯಾವುದೇ ಕಂಸರ್ವೆನ್ಸಿ ಜಾಗ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಆ ಸಂಬಂಧ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ಕಂಸರ್ವೆನ್ಸಿ ಜಾಗದ ಅಳತೆಗೆ ನಾನು ಅರ್ಜಿ ಕೊಟ್ಟಿಲ್ಲ. ದಾವಾ ಷೆಡ್ಯೂಲ್ ಬಿ ಎಂದು ತೋರಿಸಲಾಗಿರುವ ಜಾಗ ರಸ್ತೆ ಅದ ಕಂಸರ್ವೆನ್ಸಿ ಅಲ್ಲ ಬದಲಾಗಿ ಅದು ಅಂಚೆ ಇಲಾಖೆ ಸೇರಿದ ಜಾಗ ಎಂದರೆ ಸರಿಯಲ್ಲ.

6. ನಮ್ಮ ಮನೆಯ ಪಕ್ಕದಲ್ಲಿ ಓಣಿ ಇದೆ ಎಂದರೆ ಸರಿ. ಸದರಿ ಓಣಿಯನ್ನು ಎಲ್ಲರೂ ಓಡಾಡಲು ಬಳಸಲಾಗುತ್ತದೆ ಎಂದರೆ ಸಾಕ್ಷಿ ದಾವಾ ಷೆಡ್ಯೂಲ್ ಕಂಸರ್ವೆನ್ಸಿ ಜಾಗದ ಮೂಲಕ ನಮ್ಮ ಪಕ್ಕದ ಮನೆಯವರು ಓಣಿಯನ್ನು ಬಳಸಿಕೊಂಡು ಓಡಾಡುತ್ತಾರೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಬಿ ಎಂದು ತೋರಿಸಲಾಗಿರುವ ಸಂಪೂರ್ಣ ಜಾಗ ಅಂಚೆ ಇಲಾಖೆ ಸೇರಿದೆ ಎಂದರೆ ಸರಿಯಲ್ಲ. ದಿನಾಂಕ 27.05.1968 ರಂದು ಕಂಸರ್ವೆನ್ಸಿ ಜಾಗ ಎಂದು ನಾನು ಹೇಳುತ್ತಿರುವ ಸ್ವತ್ತನ್ನು ಅಂಚೆ ಇಲಾಖೆಗೆ ರೈಲ್ವೆ ಇಲಾಖೆಯವರು ಬಿಟ್ಟು ಕೊಟ್ಟಿದ್ದಾರೆ ಮತ್ತು ಆ ಸಂಬಂಧ ಸರ್ಕಾರಿ ಸುತ್ತೋಲೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸುತ್ತೋಲೆಗೆ ಒಳಪಟ್ಟ ಜಾಗ ಪ್ರತ್ಯೇಕ ಆಸ್ತಿ ಎನ್ನುತ್ತಾರೆ. ದಿನಾಂಕ 07.05.1969 ರಂದು ರೈಲ್ವೆ ಇಲಾಖೆಯವರು ತಮಗೆ ಸೇರಿದ 6x78 ಅಡಿ ಜಾಗವನ್ನು ಅಂಚೆ ಇಲಾಖೆಗೆ ಹಕ್ಕು ಖುಲಾಸೆ ಪತ್ರದ ಮೂಲಕ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸದರಿ ಜಾಗಕ್ಕೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಎಂದು ನಾನು ಉಲ್ಲೇಖಿಸಿರುವ ಸ್ವತ್ತನ್ನೇ ಹಕ್ಕು ಖುಲಾಸೆ ಪತ್ರದ ಮೂಲಕ ಅಂಚೆ ಇಲಾಖೆ ಬಿಟ್ಟು ಕೊಡಲಾಗಿದೆ ಎಂದರೆ ಸರಿಯಲ್ಲ.

7. ದಿನಾಂಕ 20.01.1969 ರಂದು ಹೊರಡಿಲಾದ ಗೇಜೆಟ್ ನೋಟೀಫಿಕೇಷನ್ ಪ್ರಕಾರ ರೈಲ್ವೆ ಇಲಾಖೆಗೆ 7x78 ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು ಎನ್ನುವುದು ಸುಳ್ಳು. ಸದರಿ ಜಾಗವನ್ನು ದಿನಾಂಕ 07.05.1969 ರ ಹಕ್ಕು ಖುಲಾಸೆ ಪತ್ರದ ಮೂಲಕ ರೈಲ್ವೆ

ಇಲಾಖೆಯಮರ ಅಂಚೆ ಇಲಾಖೆಗೆ ಬಿಟ್ಟು ಕೊಟ್ಟರು ಎನ್ನುವುದು ಸುಳ್ಳು. ಹಕ್ಕು ಖುಲಾಸೆ ಪತ್ರದಲ್ಲಿ ಸದರಿ ಜಾಗದ ವಿಸ್ತೀರ್ಣ ಕಣ್ತಪ್ಪಿನಿಂದ 6x78 ಎಂದು ನಮೂದಾಗಿದೆ ಎನ್ನುವುದು ಸುಳ್ಳು.

8. ಈಗ ಇರುವ ಅಂಚೆ ಇಲಾಖೆ ಕಟ್ಟಡದ ಪಕ್ಕದಲ್ಲೇ ರೈಲ್ವೆ ಇಲಾಖೆ ಕಾಂಪೌಂಡ್ ಇದೆ ಎಂದರೆ ಸಾಕ್ಷಿ ಕಂಸರ್ವೆನ್ಸಿ ಜಾಗ ಇದೆ ಎನ್ನುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**